**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.**

**ಸಿ.ಸಿ.ನಂ. 34/2019**

**ಫಿರ್ಯಾದಿಃ ರಾಜ್ಯದ ಪರವಾಗಿ ಯಾದಗಿರಿ ನಗರ ಪೋಲಿಸ್ ಠಾಣೆ.**

// ವಿರುದ್ಧ //

ಆರೋಪಿಗಳುಃ ದೇವಕ್ಕಿ

ಬಸವರಾಜ.

**ದೋಷಾರೋಪಣೆ**

ನಾನು ಶ್ರೀ. ಶಾಹೀಲ ಅಹಮದ್ ಶಮಶೋದ್ದೀನ್ ಕುನ್ನಿಭಾವಿ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿ ಯಾದಗಿರಿ.

ಆರೋಪಿಗಳು.

ದೇವಕ್ಕಿ ಗಂಡ ಬಸವರಾಜ ಕಾಮಣ್ಣೋರ , ವಃ 35 ವರ್ಷ, ಉಃ ಮನೆ ಕೆಲಸ , ಸಾಃ ಹೈಯಾಳ ತಾಃ ಶಹಾಪೂರ , ಜಿಃ ಗಂಧಿನಗರ ಯಾದಗಿರಿ.

ಬಸವರಾಜ ತಂದೆ ದೇವಪ್ಪ ಕಾಮಣೋರ ವಃ 36 ವರ್ಷ, ಉಃ ಮನೆ ಕೆಲಸ ಸಾಃ ಹೈಯಾಳ ತಾಃ ಶಹಾಪೂರ , ಜಿಃ ಗಂಧಿನಗರ ಯಾದಗಿರಿ.

ಆದ ನಿಮ್ಮ ಮೇಲೆ ಈ ಮೂಲಕ ಕೆಳಕಂಡಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

ಯಾದಗಿರಿ ನಗರ ಪೋಲಿಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ 1 ಮತ್ತು 2 ನೇ ಆರೋಗಳಾದ ನೀವು ಚಾಸಾಃ 1, ಹಾಗೂ ಚಾಸಾ 4 ರಿಂದ 12 ರವರಿಗೆ ಹಾಗೂ ಅನೇಕ ಜನರಿಗೆ ತಾವು ಜಿಲ್ಲಾ ಮಿನಿವಿಧಾನಸಭೆ ಯಾದಗಿರಿಯಲ್ಲಿ ದೊಡ್ಡ ಕೆಲಸದಲ್ಲಿ ಇದ್ದು ಹಾಗೂ ಅಧಿಕಾರಿ ತರ ನಟಿಸಿ ಹಾಗೂ ನಮಗೆ ಡಿ.ಸಿ ಸಾಹೇಬರ ಪರಿಚಯವಿದೆ, ಮತ್ತು ಹಣ ಪಡೆದುಕೊಂಡು ನಿಮಗೆ ಕೆಲಸ ಸಿಕ್ಕಿರುತ್ತದೆ ಅಂತಾ ಖೊಟ್ಟೆ ಕರಾರು ಪತ್ರಗಳನ್ನು ತಯಾರಿಸಿ ನಕಲಿ ಕಾಗದ ಪತ್ರವನ್ನು ಆದೇಶ ಪ್ರತಿ ಅಂತಾ ಸುಳ್ಳು ದಾಖಲಾತಿಗಳನ್ನು ಸೃಷ್ಠಿಸಿ ಮೋಸ ಮತ್ತು ವಂಚೆನೆಯನ್ನು

ಮಾಡಿರುತ್ತಿಡಿರಿ. ಈ ಮೂಲಕ ನೀವು ಭಾ.ದಂ.ಸಂ. 416 ಮತ್ತು 420 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

**ಆರೋಪಿಯ ಹೇಳಿಕೆ**

ಪ್ರಶ್ನೆ.1ಃಮೇಲೆ ಓದಿ ಹೇಳಿದ ದೋಷಾರೋಪಣೆ ತಿಳಿಯಿತೆ ಅಥವಾ ಅರ್ಥವಾಯಿತೇ?
ಉತ್ತರಃ

ಪ್ರಶ್ನೆ-2ಃ ನೀವು ತಪ್ಪೊಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗ ಬಯಸುವಿರಾ?
ಉತ್ತರಃ

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಲಾಯಿತು.)

ದಿನಾಂಕಃ 21.09.2023.

**ಮುಖ್ಯನ್ಯಾಯಿಕ ದಂಡಾಧಿಕಾರಿಗಳು,**

**ಯಾದಗಿರಿ.**